# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1. | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 16 |
| 2. | ಮಾನ್ಯ ಸದಸ್ಯರ ಹೆಸರು | ಶ್ರೀ ಎಂ.ಎ. ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3. | ಉತ್ತರಿಸಬೇಕಾದ ದಿನಾಂಕ | 02/03/2020 |
| 4. | ಉತ್ತರಿಸುವವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಾರ್ಮಿಕರ ಕಲ್ಯಾಣಕ್ಕಾಗಿ ಸರ್ಕಾರವು ರೂಪಿಸಿರುವ ಕಾರ್ಯಕ್ರಮಗಳೇನು; (ಮಾಹಿತಿ ನೀಡುವುದು) | ಕಾರ್ಮಿಕ ಇಲಾಖೆಯು ವಿವಿಧ ಕಾರ್ಮಿಕ ಕಾಯ್ದೆಗಳಡಿ ಕಾರ್ಮಿಕರಿಗೆ ಶಾಸನಾತ್ಮಕ ಸೌಲಭ್ಯಗಳನ್ನು ಒದಗಿಸುತ್ತಿದೆ. ಪ್ರಮುಖವಾಗಿ ಕನಿಷ್ಠ ವೇತನವನ್ನು 82 ಅನುಸೂಚಿತ ಉದ್ದಿಮೆಗಳಿಗೆ ನಿಗಧಿಗೊಳಿಸಿ ಕಾಲಕಾಲಕ್ಕೆ ಪರಿಷ್ಕರಿಸಲಾಗುತ್ತಿದೆ. ಹಾಗೆಯೆ ಇಲಾಖೆಯ ಅಧೀನದಲ್ಲಿ ಈ ಕೆಳಗಿನ 3 ಮಂಡಳಿಗಳು ಕಾರ್ಯನಿರ್ವಹಿಸುತ್ತಿದ್ದು, ಅವುಗಳ ಮೂಲಕ ಈ ಕೆಳಗಿನಂತೆ ಕಾರ್ಮಿಕರ ಕಲ್ಯಾಣಕ್ಕಾಗಿ ಸರ್ಕಾರವು ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿದೆ.<br><br>1] **ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ**<br>ಈ ಮಂಡಳಿಯ ವತಿಯಿಂದ ಅಸಂಘಟಿತ ವಲಯಕ್ಕೆ ಸೇರಿದ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಮತ್ತು ಅವರ ಅವಲಂಬಿತರಿಗೆ 19 ರೀತಿಯ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ನೀಡಲಾಗುತ್ತಿದ್ದು, ವಿವರವನ್ನು **ಅನುಬಂಧ-1** ರಲ್ಲಿ ಒದಗಿಸಿದೆ.<br><br>2] **ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ** ಈ ಮಂಡಳಿಯ ಮೂಲಕ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>[i] ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ.<br>ಖಾಸಗಿ ವಾಣಿಜ್ಯ ಸಾರಿಗೆ ವಾಹನ ಚಾಲಕರಿಗೆ ಸಂಬಂಧಪಟ್ಟಂತೆ ಈ ಯೋಜನೆಯಡಿ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತಿದೆ.<br><br>(ಅ) **ಅಪಘಾತ ಪರಿಹಾರ:-** ಅಪಘಾತದಿಂದಾದ ಮರಣ ಪ್ರಕರಣಗಳಲ್ಲಿ ರೂ. 5 ಲಕ್ಷದ ಪರಿಹಾರ, ಸಂಪೂರ್ಣ ಶಾಶ್ವತ ದುರ್ಬಲತೆ ಪ್ರಕರಣಗಳಲ್ಲಿ ರೂ.2 ಲಕ್ಷದ ಪರಿಹಾರ ಮತ್ತು ಒಳರೋಗಿಯಾಗಿ ಚಿಕಿತ್ಸೆ ಪಡೆದಲ್ಲಿ ರೂ.1 ಲಕ್ಷದವರೆಗೂ ಚಿಕಿತ್ಸಾ ವೆಚ್ಚದ ಮರುಪಾವತಿ ನೀಡಲಾಗುವುದು. |

ಆ) **ಶೈಕ್ಷಣಿಕ ಧನ ಸಹಾಯ**:- ಅಪಘಾತದ ಕಾರಣ ನಿಧನರಾದ ಅಥವಾ ಸಂಪೂರ್ಣ ಶಾಶ್ವತ ದುರ್ಬಲತೆ ಹೊಂದಿದ ಫಲಾನುಭವಿಗಳ ಇಬ್ಬರು ಮಕ್ಕಳಿಗೆ ಪದವಿಪೂರ್ವ ವ್ಯಾಸಂಗದವರೆಗೆ ವಾರ್ಷಿಕ 10,000/- ರೂ.ಗಳ ಶೈಕ್ಷಣಿಕ ಸಹಾಯಧನ ನೀಡಲಾಗುತ್ತಿದೆ.

(ಇ) **ಅಪಘಾತ ಜೀವ ರಕ್ಷಕ**:- ಅಪಘಾತಕ್ಕೊಳಗಾದ ಗಾಯಾಳುಗಳನ್ನು ರಕ್ಷಿಸುವ ಸ್ವಯಂಸೇವಕರನ್ನು ಸೃಷ್ಟಿಸುವ ಉದ್ದೇಶದಿಂದ ಅಪಘಾತ ಜೀವರಕ್ಷಕ ಕಾರ್ಯಕ್ರಮದಡಿ ಚಾಲಕರಿಗೆ ಪ್ರಥಮ ಚಿಕಿತ್ಸಾ ತರಬೇತಿಯನ್ನು ನೀಡಲಾಗುತ್ತಿದೆ.

(ಈ) **"ಸ್ಮಾರ್ಟ್ ಕಾರ್ಡ್"**:- ಯೋಜನೆಯಡಿ ಖಾಸಗಿ ವಾಣಿಜ್ಯ ವಾಹನ ಚಾಲಕರಿಗೆ "ಸ್ಮಾರ್ಟ್ ಕಾರ್ಡ್" ನೀಡಲಾಗುತ್ತಿದೆ.

[ii] **ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ.**

ಯೋಜನೆಯಡಿ 11 ಅಸಂಘಟಿತ ಕಾರ್ಮಿಕರ ವರ್ಗಗಳಾದ "ಹಮಾಲರು, ಮನೆಗೆಲಸದವರು, ಚಿಂದಿ ಆಯುವವರು, ಟೈಲರ್ಸ್, ಮೆಕ್ಯಾನಿಕ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಕ್ಷೌರಿಕರು ಹಾಗೂ ಭಟ್ಟಿ ಕಾರ್ಮಿಕ"ರನ್ನು ನೋಂದಾಯಿಸಿ ಸ್ಮಾರ್ಟ್ ಕಾರ್ಡ್ ವಿತರಿಸಲಾಗುತ್ತಿದೆ.

[iii] **ಆಶಾದೀಪ ಯೋಜನೆ.**

ಖಾಸಗಿ ಉದ್ಯೋಗಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳ ನೇಮಕಾತಿಯನ್ನು ಉತ್ತೇಜಿಸಲು "ಆಶಾದೀಪ ಯೋಜನೆ"ಯನ್ನು ರೂಪಿಸಿದ್ದು, ಪ್ರಸಕ್ತ ಸಾಲಿನಿಂದ ಕರ್ನಾಟಕ ರಾಜ್ಯ ಕಾರ್ಮಿಕರ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ (ಆಶಾದೀಪ ಯೋಜನೆ) ಸೊಸೈಟಿಯ ಮುಖಾಂತರ ಜಾರಿಗೊಳಿಸುತ್ತಿದೆ. ಈ ಯೋಜನೆಯಡಿ ದೊರಕುವ ಸೌಲಭ್ಯಗಳು ಕೆಳಗಿನಂತಿವೆ.

(ಅ) **ಮಾಲೀಕರ ಪಾಲಿನ ಇಎಸ್ಐ ಮತ್ತು ಇಪಿಎಫ್ ವಂತಿಕೆ ಮರುಪಾವತಿ**:-

ಖಾಸಗಿ ವಲಯದ ಸಂಸ್ಥೆಗಳಲ್ಲಿ ಹೊಸದಾಗಿ ನೇಮಿಸಿಕೊಂಡ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ಯೋಗಿಗಳಿಗೆ ಮಾಲೀಕರು/ಉದ್ಯೋಗದಾತರು ಕಡ್ಡಾಯವಾಗಿ ಪಾವತಿಸಿದ ಶಾಸನಬದ್ಧ ಭವಿಷ್ಯನಿಧಿ ಹಾಗೂ ಇ.ಎಸ್.ಐ. ವಂತಿಕೆಯನ್ನು ರಾಜ್ಯ ಸರ್ಕಾರದಿಂದ ಮಾಲೀಕರು/ ಉದ್ಯೋಗದಾತರಿಗೆ ಮಾಸಿಕ ಗರಿಷ್ಠ ತಲಾ ರೂ.3000/-ಗಳ ಮಿತಿಯೊಳಗೆ ಮರುಪಾವತಿಸಲಾಗುತ್ತಿದೆ.

(ಆ) **ಅಪ್ರೆಂಟಿಸ್ ತರಬೇತಿ ಪಡೆಯುತ್ತಿರುವ ಅಭ್ಯರ್ಥಿಗಳಿಗೆ ಮಾಲೀಕರು ಪಾವತಿಸಿರುವ ಶಿಷ್ಯ ವೇತನ (Stipend) ಮರುಪಾವತಿ:–**

ಒಂದು ವರ್ಷದ ಅವಧಿಯ ಸಾಮಾನ್ಯ (Normal) ಹಾಗೂ ಎರಡು ವರ್ಷಗಳ ಅವಧಿಯ ಸಮಗ್ರ (Comprehensive) ಅಪ್ರೆಂಟಿಸ್ ತರಬೇತಿ ಪಡೆಯುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಅಪ್ರೆಂಟಿಸ್‌ಶಿಪ್ ಕಾಯ್ದೆ, 1961 ರನ್ವಯ ಮಾಲೀಕರು ಪಾವತಿಸಿದ ಮಾಸಿಕ ಶಿಷ್ಯವೇತನ (Stipend) ಮೊತ್ತದಲ್ಲಿ 2/3 ರಷ್ಟು ಮೊತ್ತವನ್ನು ಮಾಸಿಕ ತಲಾ ರೂ.5000/– ಗಳ ಗರಿಷ್ಠ ಮಿತಿಯೊಳಗೆ ಮಾಲೀಕರಿಗೆ ಮರುಪಾವತಿಸಲಾಗುವುದು.

(ಇ) **ಅಪ್ರೆಂಟಿಸ್ ತರಬೇತಿ ನಂತರ ಅದೇ ಅಭ್ಯರ್ಥಿಯನ್ನು ಅದೇ ಮಾಲೀಕರು ಖಾಯಂ ಮಾಡಿದಲ್ಲಿ ವೇತನ ಮರುಪಾವತಿ:–**

ಅಪ್ರೆಂಟಿಸ್ ತರಬೇತಿ ಪಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳನ್ನೇ ಅದೇ ಮಾಲೀಕರು ನೇಮಕಾತಿ ಮಾಡಿಕೊಂಡಲ್ಲಿ, ಅಂತಹ ನೌಕರರಿಗೆ ಆಯಾ ಹುದ್ದೆಗಳಿಗೆ ಸರ್ಕಾರ ನಿಗದಿಪಡಿಸಿದ ಕನಿಷ್ಠ ವೇತನ ದರದಲ್ಲಿ ಶೇ.50 ರಷ್ಟು ಮೊತ್ತವನ್ನು ಮಾಸಿಕ ಗರಿಷ್ಠ ತಲಾ ರೂ. 7000/–ಗಳ ಮಿತಿಯೊಳಗೆ ಉದ್ಯೋಗದಾತರಿಗೆ ಒಂದು ವರ್ಷದ ಅವಧಿಗೆ ಮರುಪಾವತಿ ಮಾಡಲಾಗುತ್ತದೆ.

(ಈ) **ಪ್ರಧಾನಮಂತ್ರಿ ಶ್ರಮಯೋಗಿ ಮಾನ್‌ಧನ್ ಯೋಜನೆ:**

ಅಸಂಘಟಿತ ಕಾರ್ಮಿಕರಿಗೆ ಅವರ ಜೀವನ ಸಂಧ್ಯಾಕಾಲದಲ್ಲಿ ರೂ.3000–00 ಗಳ ಮಾಸಿಕ ಕನಿಷ್ಠ ಪಿಂಚಣಿಯನ್ನು ಒದಗಿಸುವ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾಗಿದ್ದು, ಇದನ್ನು ಇಲಾಖೆಯು ಅನುಷ್ಠಾನಗೊಳಿಸುತ್ತಿದ್ದು, ಸದರಿ ಯೋಜನೆಯಲ್ಲಿ 18 ರಿಂದ 40 ವರ್ಷ ವಯಸ್ಸಿನ ಅಸಂಘಟಿತ ಕಾರ್ಮಿಕರು ನೊಂದಣಿಗೆ ಅರ್ಹರಾಗಿರುತ್ತಾರೆ.

**3] ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ:**

ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಗೆ ವಂತಿಕೆ ಪಾವತಿಸುವ ವಿವಿಧ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಸಂಘಟಿತ ಕಾರ್ಮಿಕರು ಮತ್ತು ಅವರ ಕುಟುಂಬದ ಅವಲಂಬಿತರಿಗೆ ಈ ಕೆಳಕಂಡ ಕಲ್ಯಾಣ ಯೋಜನೆಗಳು ಜಾರಿಯಲ್ಲಿರುತ್ತವೆ.

1. ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ
2. ವೈದ್ಯಕೀಯ ನೆರವು.
3. ಅಪಘಾತ ಧನ ಸಹಾಯ.
4. ಮೃತ ಕಾರ್ಮಿಕರ ಅಂತ್ಯ ಸಂಸ್ಕಾರಕ್ಕೆ ಧನ ಸಹಾಯ.
5. ವಾರ್ಷಿಕ ವೈದ್ಯಕೀಯ ತಪಾಸಣೆ ಶಿಬಿರಕ್ಕೆ ಧನ ಸಹಾಯ.
6. ವಾರ್ಷಿಕ ಕ್ರೀಡಾಕೂಟ ಹಮ್ಮಿಕೊಳ್ಳುವ ಕಾರ್ಮಿಕ ಸಂಘಟನೆಗೆ ಧನ ಸಹಾಯ

| | | |
|---|---|---|
| ಅ) | ಸರ್ಕಾರವು ಯಾವ ಯಾವ ರೀತಿಯ ಕಾರ್ಮಿಕರನ್ನು ಗುರುತಿಸಿದೆ; ಹಾಸನ ಜಿಲ್ಲೆಯಲ್ಲಿ ಇಂತಹ ಎಷ್ಟು ಕಾರ್ಮಿಕರಿದ್ದಾರೆ; ಈ ಕಾರ್ಮಿಕರನ್ನು ಗುರುತಿಸಿ ಅವರಿಗಾಗಿ ಸರ್ಕಾರವು ರೂಪಿಸಿರುವ ಯೋಜನೆಗಳನ್ನು ತಲುಪಿಸಲು ಅನುಸರಿಸುತ್ತಿರುವ ಕ್ರಮಗಳೇನು; (ವಿವರ ನೀಡುವುದು) | **1] ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ**<br>ಈ ಮಂಡಳಿಯಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕ್ಷೇತ್ರದಲ್ಲಿ ದುಡಿಯುತ್ತಿರುವ ಕಾರ್ಮಿಕರನ್ನು ಗುರುತಿಸಿ ಮಂಡಳಿಯ ಫಲಾನುಭವಿಗಳೆಂದು ನೋಂದಾಯಿಸಲಾಗುತ್ತಿದೆ. ಹಾಸನ ಜಿಲ್ಲೆಯಲ್ಲಿ ಇಲ್ಲಿಯವರೆಗೆ ಒಟ್ಟು **39,049** ಕಾರ್ಮಿಕರನ್ನು ಮಂಡಳಿಯ ಫಲಾನುಭವಿಗಳಾಗಿ ನೋಂದಾಯಿಸಲಾಗಿರುತ್ತದೆ.<br><br>ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಮಂಡಳಿಯ ನೋಂದಣಿ ಮತ್ತು ಸೌಲಭ್ಯಗಳ ಕುರಿತು ಜಾಗೃತಿ ಮೂಡಿಸಲು:<br><br>• ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರದೊಂದಿಗೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಕಟ್ಟಡ ಕಾರ್ಮಿಕರ ನೊಂದಣಿ ಮತ್ತು ಮಂಡಳಿಯ ಸೌಲಭ್ಯಗಳ ಕುರಿತು ನಿರಂತರವಾಗಿ ಜಾಗೃತಿ ಮೂಡಿಸಲಾಗುತ್ತಿದೆ.<br>• ಜಿಲ್ಲೆಯಾದ್ಯಂತ ಇರುವ ಜಿಲ್ಲಾಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್ ಕಛೇರಿ, ತಾಲ್ಲೂಕು ಕಛೇರಿಗಳು ಮತ್ತು ಸ್ವಂತ ಕಟ್ಟಡ ಹೊಂದಿರುವ ಕಾರ್ಮಿಕ ಇಲಾಖೆಯ ಕಛೇರಿಗಳಲ್ಲಿ ಹೋರ್ಡಿಂಗ್‌ಗಳನ್ನು ಅಳವಡಿಸುವ ಮೂಲಕ ಪ್ರಚಾರವನ್ನು ಕೈಗೊಳ್ಳಲಾಗಿರುತ್ತದೆ.<br>• ಜನ ಪ್ರತಿನಿಧಿಗಳು ಮತ್ತು ಕಾರ್ಮಿಕ ಸಂಘಟನೆಗಳ ಮೂಲಕವು **ನೋಂದಣಿ ಬಗ್ಗೆ ವ್ಯಾಪಕ ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ.**<br>• ನೋಂದಣಿ ಹಾಗೂ ಮಂಡಳಿಯ ಸೌಲಭ್ಯಗಳ ಬಗ್ಗೆ ವ್ಯಾಪಕ ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ದಿಸೆಯಲ್ಲಿ ಸಮಗ್ರ ಐ.ಇ.ಸಿ ಕಾರ್ಯಕ್ರಮಗಳಾದ ಬೀದಿ ನಾಟಕಗಳು, ಕರಪತ್ರಗಳ ಹಂಚಿಕೆ, ದಿನಪತ್ರಿಕೆಗಳಲ್ಲಿ ಜಾಹಿರಾತು, ಕಾರ್ಮಿಕರಿಗೆ ಕ್ಯಾಲೆಂಡರ್‌ಗಳ ವಿತರಣೆ ಮತ್ತು ಎಸ್.ಎಂ.ಎಸ್ ಸಂದೇಶಗಳನ್ನು ರವಾನಿಸಲಾಗಿರುತ್ತದೆ.<br>• **24x7** ಉಚಿತ ಸಹಾಯವಾಣಿ ಮತ್ತು ಕಂಟ್ರೋಲ್ ರೂಮ್ ಸೇವೆಯನ್ನು ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರ ಕುಂದು ಕೊರತೆಗಳನ್ನು ಆಲಿಸಲು ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಕಲ್ಯಾಣ ಸುರಕ್ಷಾ ಭವನದ 4ನೇ ಮಹಡಿಯಲ್ಲಿ ಪ್ರಾರಂಭಿಸಲಾಗಿದ್ದು, ಈ ಸೇವೆಯನ್ನು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಸಹ ಪಡೆಯಲು ಅನುಕೂಲವಾಗುತ್ತದೆ.<br>• ಮಂಡಳಿಯು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರನ್ನು ಗುರುತಿಸಿ ನೋಂದಣಿ ಮಾಡಿಸಲು, ಕಾನೂನು ಅರಿವು ಮೂಡಿಸಲು ಹಾಗು ಮಂಡಳಿಯ ಸೌಲಭ್ಯಗಳನ್ನು ಫಲಾನುಭವಿಗಳಿಗೆ ತಲುಪಿಸುವ |

ಸದುದ್ದೇಶದಿಂದ ಪ್ರತಿ ಗ್ರಾಮ ಪಂಚಾಯಿತಿವಾರು ಹಾಗು ಮಹಾನಗರ ಪಾಲಿಕೆಗಳಲ್ಲಿ ಪ್ರತಿ 2 ವಾರ್ಡ್‌ಗಳಿಗೊಬ್ಬ ಕಾರ್ಮಿಕ ಬಂಧುಗಳನ್ನು ಕಮೀಷನ್ ಆಧಾರದ ಮೇಲೆ ನೇಮಿಸಲಾಗಿದೆ.

- ಆನ್‌ಲೈನ್ ಮೂಲಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರನ್ನು ನೋಂದಾಯಿಸುವ ಹಾಗು ಸೌಲಭ್ಯಗಳನ್ನು ಪಡೆಯುವ ಪ್ರಕ್ರಿಯೆ ಜಾರಿಯಲ್ಲಿದ್ದು, ಪ್ರಸ್ತುತ ಇದನ್ನು ಕಾರ್ಮಿಕ ನಿರೀಕ್ಷಕರುಗಳ ಕಛೇರಿಗಳು / ಸೇವಾ ಸಿಂಧು ಕೇಂದ್ರಗಳು (Common Service Centre – CSC) / ಸ್ವತಃ ಕಾರ್ಮಿಕರೇ ನೋಂದಾಯಿಸಿಕೊಳ್ಳಲು ಹಾಗು ಸೌಲಭ್ಯಗಳಿಗಾಗಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

2] ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ

ಕರ್ನಾಟಕ ಸರ್ಕಾರವು 43 ವರ್ಗಗಳ ಅಸಂಘಟಿತ ಕಾರ್ಮಿಕರನ್ನು ಗುರುತಿಸಿರುತ್ತದೆ (ಪಟ್ಟಿಯನ್ನು ಅನುಬಂಧ-2ರಲ್ಲಿ ಒದಗಿಸಿದೆ).
ಮಂಡಳಿಯು ಜಾರಿಗೊಳಿಸುತ್ತಿರುವ ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆಯಡಿ ಸಾರಿಗೆ ಇಲಾಖೆಯ ದತ್ತಾಂಶದ ಪ್ರಕಾರ ಹಾಸನ ಜಿಲ್ಲೆಯಲ್ಲಿ 34001 ಚಾಲಕರು ಊರ್ಜಿತ ಚಾಲನಾ ಪರವಾನಗಿ ಹೊಂದಿದ್ದು, ಈ ಎಲ್ಲಾ ಚಾಲಕರು ಈ ಯೋಜನೆಯಡಿ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ.
ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆಯಡಿ ಹಾಸನ ಜಿಲ್ಲೆಯಲ್ಲಿ, 11 ವಲಯಗಳ ಅಸಂಘಟಿತ ಕಾರ್ಮಿಕರಾದ ಹಮಾಲರು, ಗೃಹಕಾರ್ಮಿಕರು, ಚಿಂದಿ ಆಯುವವರು, ಟೈಲರ್‌ಗಳು, ಮೆಕ್ಯಾನಿಕ್ಸ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಕ್ಷೌರಿಕರು ಹಾಗೂ ಭಟ್ಟಿ ಕಾರ್ಮಿಕ ವರ್ಗಗಳ ಒಟ್ಟು 1195 ಅಸಂಘಟಿತ ಕಾರ್ಮಿಕರನ್ನು ನೋಂದಾಯಿಸಿ ಸ್ಮಾರ್ಟ್ ಕಾರ್ಡ್ ವಿತರಿಸಲಾಗಿದೆ.

ಪ್ರಧಾನಮಂತ್ರಿ ಶ್ರಮಯೋಗಿ ಮಾನ್‌ಧನ್ ಯೋಜನೆಯಡಿ ಹಾಸನ ಜಿಲ್ಲೆಯಲ್ಲಿ ಇದುವರೆಗೆ 2171 ಫಲಾನುಭವಿಗಳನ್ನು ನೊಂದಣಿ ಮಾಡಲಾಗಿದೆ.

3] ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ:
ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಗೆ ಸಂಘಟಿತ ಕಾರ್ಮಿಕರು ಒಳಪಡುತ್ತಾರೆ ಹಾಸನ ಜಿಲ್ಲೆಯಲ್ಲಿ ಒಟ್ಟು 19585 ಸಂಘಟಿತ ಕಾರ್ಮಿಕರು ದಾಖಲೆಯಾಗಿರುತ್ತಾರೆ. ಸದರಿ ಸಂಘಟಿತ ಕಾರ್ಮಿಕರಿಗಾಗಿ ಮಂಡಳಿಯಲ್ಲಿ ಪ್ರಸ್ತುತ ಜಾರಿಯಲ್ಲಿರುವ ಕಲ್ಯಾಣ ಯೋಜನೆಗಳಡಿಯಲ್ಲಿ ಧನ ಸಹಾಯ ಸೌಲಭ್ಯವನ್ನು ಫಲಾನುಭವಿಗಳ ಉಳಿತಾಯ ಖಾತೆಗೆ ನೇರವಾಗಿ ಆರ್.ಟಿ.ಜಿ.ಎಸ್ ಮೂಲಕ ಜಮಾ ಮಾಡಲಾಗುತ್ತದೆ.

<table>
<tr><td></td><td></td><td>
ಹಾಸನ ಜಿಲ್ಲೆಯ ಮಾಹಿತಿ:
ಇಲಾಖೆಯು ಕಾರ್ಮಿಕರನ್ನು ಗುರುತಿಸಲು ನಿರ್ದಿಷ್ಟವಾಗಿ ಯಾವುದೇ ಸಮೀಕ್ಷೆಯನ್ನು ನಡೆಸಿರುವುದಿಲ್ಲ. ಇಲಾಖೆಯಲ್ಲಿ ಅನುಷ್ಠಾನಗೊಳಿಸುತ್ತಿರುವ ವಿವಿಧ ಕಾಯ್ದೆಗಳು ಹಾಗೂ ಯೋಜನೆಗಳಡಿ ನೊಂದಣಿಯಾಗಿರುವ ಕಾರ್ಮಿಕರ ವಿವರಗಳನ್ನು ಈ ಕೆಳಕಂಡಂತಿದೆ.
<table>
<tr><th>ಕ್ರಮ ಸಂಖ್ಯೆ</th><th>ವರ್ಗಗಳು</th><th>ಸಂಸ್ಥೆಗಳು</th><th>ಕಾರ್ಮಿಕರ ಸಂಖ್ಯೆ</th></tr>
<tr><td>1</td><td>ತೋಟಗಳು</td><td>235</td><td>3205</td></tr>
<tr><td>2</td><td>ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳು</td><td>8208</td><td>13,835</td></tr>
<tr><td>3</td><td>ಗುತ್ತಿಗೆ ಕಾರ್ಮಿಕರು</td><td>20</td><td>6431</td></tr>
<tr><td>4</td><td>ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು</td><td>–</td><td>39,049</td></tr>
<tr><td>5</td><td>ಅಂಬೇಡ್ಕರ್ ಸಹಾಯ ಹಸ್ತ ಯೋಜನೆಯಡಿ ನೋಂದಾಯಿತ ಅಸಂಘಟಿತ ಕಾರ್ಮಿಕರು</td><td>–</td><td>1195</td></tr>
<tr><td>6</td><td>ಪ್ರಧಾನಮಂತ್ರಿ ಶ್ರಮಯೋಗಿ ಮಾನ್‌ಧನ್ ಯೋಜನೆ</td><td>–</td><td>2171</td></tr>
</table>
</td></tr>
<tr><td>ಇ)</td><td>ಹಾಸನ ಜಿಲ್ಲೆಯಲ್ಲಿ ಯಾವ ಯಾವ ಕೈಗಾರಿಕೆ ಮತ್ತು ಉದ್ಯಮಗಳಲ್ಲಿ ಎಷ್ಟೆಷ್ಟು ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ (ವಿವರ ನೀಡುವುದು)</td><td>ಕಾರ್ಖಾನೆಗಳ ಕಾಯ್ದೆ 1948ರಡಿಯಲ್ಲಿ ನೋಂದಾವಣೆಯಾಗಿರುವ ಕಾರ್ಖಾನೆಗಳ ವಿವರ ಹಾಗೂ ಕಾರ್ಮಿಕರ ಸಂಖ್ಯೆಯ ಮಾಹಿತಿಯನ್ನು ಅನುಬಂಧ-3 ರಲ್ಲಿ ಒದಗಿಸಿದೆ.</td></tr>
<tr><td>ಈ)</td><td>ಹಾಸನ ಜಿಲ್ಲೆಯ ಕಾರ್ಮಿಕ ಇಲಾಖೆಗೆ ಕಳೆದ 3 ವರ್ಷಗಳಲ್ಲಿ ಸರ್ಕಾರದಿಂದ ಬಿಡುಗಡೆಯಾದ ಅನುದಾನವೆಷ್ಟು; ಈ ಅನುದಾನವನ್ನು ಯಾವ ಯಾವ ಉದ್ದೇಶಗಳಿಗಾಗಿ ಖರ್ಚು ಮಾಡಲಾಗಿದೆ? ವಿವರ ನೀಡುವುದು</td><td>
ಇಲಾಖೆಯು ಕಾರ್ಮಿಕ ಕಲ್ಯಾಣಕ್ಕಾಗಿ ಪ್ರತ್ಯೇಕವಾಗಿ ಯಾವುದೇ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿಲ್ಲ. ಆದರೆ, ಇಲಾಖೆಯ ಅಧೀನದಲ್ಲಿರುವ ವಿವಿಧ ಮಂಡಳಿಗಳ ಮೂಲಕ ಹಲವಾರು ಕಲ್ಯಾಣ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದ್ದು, ಈ ಯೋಜನೆಗಳ ಅನುಷ್ಠಾನಕ್ಕಾಗಿ ಹಾಸನ ಜಿಲ್ಲೆಗೆ ಬಿಡುಗಡೆ ಮಾಡಿದ ಮೊತ್ತವು ಈ ಕೆಳಕಂಡಂತೆ ಇರುತ್ತದೆ.
ಕರ್ನಾಟಕ ರಾಜ್ಯ ಬಾಲಕಾರ್ಮಿಕ ಯೋಜನಾ ಸೊಸೈಟಿ
<table>
<tr><th>ಉದ್ದೇಶ</th><th>ವರ್ಷ</th><th>ಬಿಡುಗಡೆಯಾದ ಅನುದಾನ (ರೂ)</th><th>ಖರ್ಚು (ರೂ)</th></tr>
<tr><td>ಸಿಬ್ಬಂದಿ</td><td>2017-18</td><td>24,46,545</td><td>11,45,399</td></tr>
</table>
</td></tr>
</table>

| | | | |
|---|---|---|---|
| ಗೌರವಧನ ಹಾಗೂ ಜಾಗೃತಿ ಕಾರ್ಯಕ್ರಮಕ್ಕಾಗಿ | 2018-19 | 9,29,000 | 4,90,384 |
| | 2019-20 | 8,30,000 | 10,45,836 |

**ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ**

ಹಾಸನ ಜಿಲ್ಲೆಗೆ ಸರ್ಕಾರದಿಂದ ಪ್ರತ್ಯೇಕವಾಗಿ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ. ಮಂಡಳಿಯಿಂದ ಕಳೆದ ಮೂರು ವರ್ಷಗಳಲ್ಲಿ ಹಾಸನ ಜಿಲ್ಲೆಗೆ ಯೋಜನೆಗಳಡಿಯಲ್ಲಿ ನೀಡಿರುವ ಸೌಲಭ್ಯಗಳ ವಿವರ ಈ ಕೆಳಕಂಡಂತಿರುತ್ತದೆ.

| ವರ್ಷ | ಫಲಾನುಭವಿಗಳ ಸಂಖ್ಯೆ | ಮೊತ್ತ |
|---|---|---|
| 2017-18 | 344 | 13,17,000 |
| 2018-19 | 449 | 18,73,000 |
| 2019-20 | 1202 | 46,44,000 |

**ಕರ್ನಾಟಕ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ**

ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ

| ಉದ್ದೇಶ | ವರ್ಷ | ಬಿಡುಗಡೆಯಾದ ಅನುದಾನ (ರೂ) | ಖರ್ಚು (ರೂ) |
|---|---|---|---|
| ಕಾರ್ಮಿಕ ಸೇವಾ ಕೇಂದ್ರ | 2017-18 | - | - |
| | 2018-19 | 14,57,200 | - |
| | 2019-20 | 2,40,000 | 46,44,000 |
| ಶ್ರಮ ಸನ್ಮಾನ ಪ್ರಶಸ್ತಿ | 2017-18 | - | - |
| | 2018-19 | 4,47,050 | 4,06,555 |
| | 2019-20 | 5,51,000 | - |

ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ

| ಉದ್ದೇಶ | ವರ್ಷ | ಬಿಡುಗಡೆಯಾದ ಅನುದಾನ (ರೂ) | ಖರ್ಚು (ರೂ) |
|---|---|---|---|
| ಅಪಘಾತ | 2017-18 | 2,80,000 | 2,32,500 |

| | | | |
|---|---|---|---|
| ಜೀವ ರಕ್ಷಕ ತರಬೇತಿ | 2018–19 | 5,25,000 | 3,18,000 |
| | 2019–20 | – | – |
| ಶ್ರಮ ಸನ್ಮಾನ ಪ್ರಶಸ್ತಿ | 2017–18 | – | – |
| | 2018–19 | 54,800 | – |
| | 2019–20 | 82,000 | – |
| ಅಪಘಾತ ಪರಿಹಾರ | 2017–18 | 10,00,000 | 10,00,000 |
| | 2018–19 | 19,00,000 | 19,00,000 |
| | 2019–20 | 25,50,000 | 25,00,000 |
| ಶೈಕ್ಷಣಿಕ ಧನ ಸಹಾಯ | 2017–18 | – | – |
| | 2018–19 | 30,000 | 30,000 |
| | 2019–20 | 20,000 | 20,000 |

ಆಶಾದೀಪ ಯೋಜನೆ

| ಉದ್ದೇಶ | ವರ್ಷ | ಬಿಡುಗಡೆಯಾದ ಅನುದಾನ (ರೂ) | ಖರ್ಚು (ರೂ) |
|---|---|---|---|
| ಖಾಸಗಿ ಸಂಸ್ಥೆಗಳಲ್ಲಿ ಪ.ಜಾ ಮತ್ತು ಪ.ಪಂ. ಕಾರ್ಮಿಕ ನೇಮಕಾತಿಯನ್ನು ಉತ್ತೇಜಿಸಲು | 2017–18 | – | – |
| | 2018–19 | – | – |
| | 2019–20 | 50,00,000 | – |

ಸಂಖ್ಯೆ: ಇ-ಕಾಇ 63 ಎಲ್‌ಇಟಿ 2020

(ಅರೆಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಮತ್ತು ಸಕ್ಕರೆ ಮಂತ್ರಿಗಳು

## ಅನುಬಂಧ-I

## ಫಲಾನುಭವಿಗಳಿಗೆ ಸಿಗುವ ಸೌಲಭ್ಯಗಳು

1. ಪಿಂಚಣಿ ಸೌಲಭ್ಯ: ಮೂರು ವರ್ಷ ಸದಸ್ಯತ್ವದೊಂದಿಗೆ 60 ವರ್ಷ ಪೂರೈಸಿದ ಫಲಾನುಭವಿಗೆ ಮಾಸಿಕ ರೂ.2,000/-
2. ಕುಟುಂಬ ಪಿಂಚಣಿ ಸೌಲಭ್ಯ: ಮೃತ ಪಿಂಚಣಿದಾರರ ಪತಿ / ಪತ್ನಿ ಮಾಸಿಕ ರೂ.1000/-
3. ದುರ್ಬಲತೆ ಪಿಂಚಣಿ: ನೋಂದಾಯಿತ ಫಲಾನುಭವಿಯು ಖಾಯಿಲೆಗಳಿಂದ ಅಥವಾ ಕಟ್ಟಡ ಕಾಮಗಾರಿಗಳ ಅಪಘಾತದಿಂದ ಶಾಶ್ವತ/ಭಾಗಶಃ ಅಂಗವಿಕಲತೆ ಹೊಂದಿದ್ದರೆ ಮಾಸಿಕ ರೂ.2,000/- ಪಿಂಚಣಿ ಹಾಗೂ ಶೇಕಡವಾರು ದುರ್ಬಲತೆಯನ್ನಾಧರಿಸಿ ರೂ.2,00,000/- ದವರೆಗೆ ಅನುಗ್ರಹ ರಾಶಿ ಸಹಾಯಧನ.
4. ಕನ್ನಡಕ, ಶ್ರವಣಯಂತ್ರ, ಕೃತಕ ಕೈಕಾಲು ಮತ್ತು ಗಾಲಿ ಕುರ್ಚಿ ಮರುಪಾವತಿ ಸೌಲಭ್ಯ
5. ಟ್ರೈನಿಂಗ್-ಕಮ್-ಟೂಲ್‌ಕಿಟ್ ಸೌಲಭ್ಯ (ಶ್ರಮ ಸಾಮರ್ಥ್ಯ) : ರೂ.30,000/- ವರೆಗೆ
6. ಶ್ರಮ ಸಂಸಾರ ಸಾಮರ್ಥ್ಯ ತರಬೇತಿ ಸೌಲಭ್ಯ: ನೋಂದಾಯಿತ ಫಲಾನುಭವಿಯ ಅವಲಂಭಿತರಿಗೆ
7. ವಸತಿ ಸೌಲಭ್ಯ (ಕಾರ್ಮಿಕ ಗೃಹ ಭಾಗ್ಯ): ರೂ.2,00,000/- ದವರೆಗೆ ಮುಂಗಡ ಸೌಲಭ್ಯ
8. ಹೆರಿಗೆ ಸೌಲಭ್ಯ (ತಾಯಿ ಲಕ್ಷ್ಮೀ ಬಾಂಡ್): ಮಹಿಳಾ ಫಲಾನುಭವಿಯ ಮೊದಲ ಎರಡು ಮಕ್ಕಳಿಗೆ ಹೆಣ್ಣು ಮಗುವಿನ ಜನನಕ್ಕೆ ರೂ. 30,000/- ಮತ್ತು ಗಂಡು ಮಗುವಿನ ಜನನಕ್ಕೆ ರೂ.20,000/-
9. ಶಿಶು ಪಾಲನಾ ಸೌಲಭ್ಯ:
10. ಅಂತ್ಯಕ್ರಿಯೆ ವೆಚ್ಚ : ರೂ.4,000/- ಹಾಗೂ ಅನುಗ್ರಹ ರಾಶಿ ರೂ.50,000/-ಸಹಾಯಧನ
11. ಶೈಕ್ಷಣಿಕ ಸಹಾಯಧನ (ಕಲಿಕೆ ಭಾಗ್ಯ): ಫಲಾನುಭವಿಯ ಇಬ್ಬರು ಮಕ್ಕಳ ವಿದ್ಯಾಭ್ಯಾಸಕ್ಕಾಗಿ:

| ತರಗತಿ (ಉತ್ತೀರ್ಣಕ್ಕೆ) | ವಾರ್ಷಿಕ ಸಹಾಯ ಧನ | |
|---|---|---|
| | ಗಂಡು | ಹೆಣ್ಣು |
| ನರ್ಸರಿ | 3,000 | 4,000 |
| 1 ರಿಂದ 4ನೇ ತರಗತಿ | 3,000 | 4,000 |
| 5 ರಿಂದ 8ನೇ ತರಗತಿ | 5,000 | 6,000 |
| 9 ಹಾಗೂ 10ನೇ ತರಗತಿ | 10,000 | 11,000 |
| ಪ್ರಥಮ ಪಿಯುಸಿ ಮತ್ತು ದ್ವಿತೀಯ ಪಿ.ಯು.ಸಿ | 10,000 | 14,000 |
| ಐಟಿಐ | 12,000 | 15,000 |
| ಪದವಿ ಪ್ರತಿ ವರ್ಷಕ್ಕೆ | 15,000 | 20,000 |
| ಸ್ನಾತಕೋತ್ತರ ಪದವಿ ಸೇರ್ಪಡೆಗೆ | 20,000 | 20,000 |
| ಪ್ರತಿ ವರ್ಷಕ್ಕೆ | 20,000 | 25,000 |
| ಇಂಜಿನಿಯರಿಂಗ್ ಕೋರ್ಸ್ ಬಿಇ/ ಬಿ.ಟೆಕ್ ಸೇರ್ಪಡೆಗೆ | 25,000 | 25,000 |
| ಪ್ರತಿ ವರ್ಷಕ್ಕೆ | 25,000 | 30,000 |
| ವೈದ್ಯಕೀಯ ಕೋರ್ಸ್‌ಗೆ ಸೇರ್ಪಡೆಗೆ | 30,000 | 30,000 |

| | | |
|---|---|---|
| ಪ್ರತಿ ವರ್ಷಕ್ಕೆ | 40,000 | 50,000 |
| ಡಿಪ್ಲೋಮಾ | 15,000 | 20,000 |
| ಎಂ.ಟೆಕ್ / ಎಂ.ಇ | 30,000 | 35,000 |
| ಎಂ.ಡಿ (ವೈದ್ಯಕೀಯ) | 45,000 | 55,000 |
| ಪಿಹೆಚ್‌ಡಿ (ಪ್ರತಿ ವರ್ಷಕ್ಕೆ) ಗರಿಷ್ಠ 03 ವರ್ಷ | 25,000 | 30,000 |

12. **ವೈದ್ಯಕೀಯ ಸಹಾಯಧನ (ಕಾರ್ಮಿಕ ಆರೋಗ್ಯ ಭಾಗ್ಯ):** ನೋಂದಾಯಿತ ಫಲಾನುಭವಿ ಹಾಗೂ ಅವರ ಅವಲಂಭಿತರಿಗೆ ರೂ.300/- ರಿಂದ ರೂ.10,000/-ವರೆಗೆ

13. **ಅಪಘಾತ ಪರಿಹಾರ:** ಮರಣ ಹೊಂದಿದ್ದಲ್ಲಿ **ರೂ.5,00,000/-**, ಸಂಪೂರ್ಣ ಶಾಶ್ವತ ದುರ್ಬಲತೆಯಾದಲ್ಲಿ ರೂ.2,00,000/- ಮತ್ತು ಭಾಗಶಃ ಶಾಶ್ವತ ದುರ್ಬಲತೆಯಾದಲ್ಲಿ **ರೂ.1,00,000/-**

14. **ಪ್ರಮುಖ ವೈದ್ಯಕೀಯ ವೆಚ್ಚ ಸಹಾಯಧನ (ಕಾರ್ಮಿಕ ಚಿಕಿತ್ಸಾ ಭಾಗ್ಯ):** ಹೃದ್ರೋಗ, ಕಿಡ್ನಿ ಜೋಡಣೆ, ಕ್ಯಾನ್ಸರ್ ಶಸ್ತ್ರಚಿಕಿತ್ಸೆ, ಕಣ್ಣಿನ ಶಸ್ತ್ರಚಿಕಿತ್ಸೆ, ಪಾರ್ಶ್ವವಾಯು, ಮೂಳೆ ಶಸ್ತ್ರಚಿಕಿತ್ಸೆ, ಗರ್ಭಕೋಶ ಶಸ್ತ್ರಚಿಕಿತ್ಸೆ, ಅಸ್ತಮ ಚಿಕಿತ್ಸೆ, ಗರ್ಭಪಾತ ಪ್ರಕರಣಗಳು, ಪಿತ್ತಕೋಶದ ತೊಂದರೆಗೆ ಸಂಬಂಧಿತ ಚಿಕಿತ್ಸೆ, ಮೂತ್ರ ಪಿಂಡದಲ್ಲಿನ ಕಲ್ಲು ತೆಗೆಯುವ ಚಿಕಿತ್ಸೆ, ಮೆದುಳಿನ ರಕ್ತಸ್ರಾವದ ಚಿಕಿತ್ಸೆ, ಅಲ್ಸರ್ ಚಿಕಿತ್ಸೆ, ಡಯಾಲಿಸಿಸ್ ಚಿಕಿತ್ಸೆ, ಕಿಡ್ನಿ ಶಸ್ತ್ರಚಿಕಿತ್ಸೆ, ಇ.ಎನ್.ಟಿ. ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ನರರೋಗ ಶಸ್ತ್ರಚಿಕಿತ್ಸೆ, ವ್ಯಾಸ್ಕ್ಯುಲರ್ ಶಸ್ತ್ರಚಿಕಿತ್ಸೆ, ಅನ್ನನಾಳದ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಕರುಳಿನ ಶಸ್ತ್ರಚಿಕಿತ್ಸೆ, ಸ್ತನ ಸಂಬಂಧಿತ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಹರ್ನಿಯ ಶಸ್ತ್ರಚಿಕಿತ್ಸೆ, ಅಪೆಂಡಿಕ್ಸ್ ಶಸ್ತ್ರಚಿಕಿತ್ಸೆ, ಮೂಳೆ ಮುರಿತ/ಡಿಸ್‌ಲೊಕೇಶನ್ ಚಿಕಿತ್ಸೆ, ಇತರೆ **ಔದ್ಯೋಗಿಕ ಖಾಯಿಲೆಗಳ ಚಿಕಿತ್ಸೆಗಳಿಗೆ ರೂ.2,00,000/-ವರೆಗೆ**

15. **ಮದುವೆ ಸಹಾಯಧನ (ಗೃಹ ಲಕ್ಷ್ಮೀ ಬಾಂಡ್):** ಫಲಾನುಭವಿ ಅಥವಾ ಅವರ ಇಬ್ಬರು ಮಕ್ಕಳ ಮದುವೆಗೆ ತಲಾ ರೂ.50,000/-

16. **LPG ಸಂಪರ್ಕ ಸೌಲಭ್ಯ (ಕಾರ್ಮಿಕ ಅನಿಲ ಭಾಗ್ಯ):** ಅನಿಲ ಸಂಪರ್ಕದೊಂದಿಗೆ ಎರಡು ಬರ್ನರ್ ಸ್ಟೌವ್

17. **ಬಿಎಂಟಿಸಿ ಬಸ್ ಪಾಸ್ ಸೌಲಭ್ಯ:** ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿರುವಂತಹ / ವಾಸಸ್ಥಳದಿಂದ ಬೆಂಗಳೂರಿಗೆ ಪ್ರಯಾಣಿಸುವ ನೋಂದಾಯಿತ ಕಟ್ಟಡ ಕಾರ್ಮಿಕರಿಗ

18. **ಕೆಎಸ್‌ಆರ್‌ಟಿಸಿ ಬಸ್ ಪಾಸ್‌ನ ಸೌಲಭ್ಯ:** ರಾಜ್ಯದಾದ್ಯಂತ ವಿದ್ಯಾಭ್ಯಾಸದಲ್ಲಿ ತೊಡಗಿರುವ ನೋಂದಾಯಿತ ಕಾರ್ಮಿಕರ ಇಬ್ಬರು ಮಕ್ಕಳಿಗೆ

19. **ತಾಯಿ ಮಗು ಸಹಾಯ ಹಸ್ತ:** ಮಹಿಳಾ ಫಲಾನುಭವಿಯು ಮಗುವಿಗೆ ಜನ್ಮ ನೀಡಿದ ಸಂದರ್ಭದಲ್ಲಿ ಆಕೆಯ ಮಗುವಿನ ಶಾಲಾ ಪೂರ್ವ ಶಿಕ್ಷಣ ಮತ್ತು ಪೌಷ್ಟಿಕತೆಗಾಗಿ ಮಗುವಿಗೆ ಮೂರು ವರ್ಷಗಳು ತುಂಬುವವರೆಗೆ ವಾರ್ಷಿಕ ರೂ.6,000/- ಗಳ ಸಹಾಯಧನ

## ಅನುಬಂಧ-2

## 43 ವರ್ಗಗಳ ಅಸಂಘಟಿತ ಕಾರ್ಮಿಕರ ಪಟ್ಟಿ

1. ದರ್ಜಿಗಳು
2. ದೋಬಿಗಳು
3. ಹಮಾಲಿಗಳು
4. ಹೋಟೆಲ್ ಕಾರ್ಮಿಕರು
5. ಆಟೋ ಮತ್ತು ಟ್ಯಾಕ್ಸಿ ಚಾಲಕರು ಹಾಗೂ ಖಾಸಗಿ ಬಸ್, ಲಾರಿ ಚಾಲಕರು ಹಾಗೂ ನಿರ್ವಾಹಕರು
6. ಆಟೋಮೊಬೈಲ್ ವರ್ಕ್‌ಶಾಪ್‌ಗಳಲ್ಲಿ ಕೆಲಸ ಮಾಡುವ ಕಾರ್ಮಿಕರು ಮತ್ತು
7. ಗೃಹ ಕಾರ್ಮಿಕರು
8. ಕೃಷಿ/ತೋಟಗಾರಿಕೆ/ಹೈನುಗಾರಿಕೆ ಕೆಲಸಗಳಲ್ಲಿ ತೊಡಗಿರುವ ಕೂಲಿ ಕಾರ್ಮಿಕರು
9. ನಾರಿನ ಉದ್ದಿಮೆಯಲ್ಲಿ ತೊಡಗಿರುವ ಕೂಲಿ ಕಾರ್ಮಿಕರು
10. ಮನೆಗಳಲ್ಲಿ ನೇಯ್ಗೆ ಕೆಲಸ ಮಾಡುವ ನೇಕಾರರು
11. ಮೀನುಗಾರರು
12. ಕುಂಬಾರರು
13. ಚಮ್ಮಾರರು
14. ಕ್ಷೌರಿಕರು
15. ಕಸಾಯಿ ಖಾನೆ ಕಾರ್ಮಿಕರು
16. ಕಮ್ಮಾರರು
17. ಚಿನಿವಾರರು/ಅಕ್ಕಸಾಲಿಗರು
18. ಮನೆಗಳಲ್ಲಿ ಬೀಡಿ ಕಟ್ಟುವವರು
19. ಮನೆಗಳಲ್ಲಿ ಅಗರಬತ್ತಿ ತಯಾರಿಸುವ ಕಾರ್ಮಿಕರು
20. ಶಿಲ್ಪಕಾರರು/ ಹಸ್ತ ಕುಶಲ ಕಾರ್ಮಿಕರು
21. ಚಿತ್ರ ಬಿಡಿಸುವವರು
22. ಬಿದಿರಿನ ವಸ್ತುಗಳನ್ನು ತಯಾರು ಮಾಡುವವರು
23. ಖಾದ್ಯ ತೈಲ/ಮನೆಯಲ್ಲಿ ಆಹಾರ ವಸ್ತುಗಳ ಸಂಸ್ಕರಣೆ ಕೆಲಸದಲ್ಲಿ ತೊಡಗಿರುವವರು.
24. ಟಿಂಬರ್ ಕೆಲಸದಲ್ಲಿ ತೊಡಗಿರುವ ಕಾರ್ಮಿಕರು
25. ರೇಷ್ಮೆ ಕಾರ್ಮಿಕರು
26. ಕಾಟನ್ ಗಿನ್ನಿಂಗ್ ಮತ್ತು ಪ್ರೊಸೆಸಿಂಗ್ ಕೆಲಸದಲ್ಲಿ ತೊಡಗಿರುವಕಾರ್ಮಿಕರು
27. ಮುದ್ರಣ ಕೆಲಸದಲ್ಲಿ ತೊಡಗಿರುವ ಕಾರ್ಮಿಕರು
28. ಕಲ್ಲು ಒಡೆಯುವಕಾರ್ಮಿಕರು
29. ಚರ್ಮ ಹದ ಮಾಡುವ ಕೆಲಸದಲ್ಲಿ ತೊಡಗಿರುವ ಕಾರ್ಮಿಕರು
30. ಎಲ್ಲಾ ವಿಧದ ಮಿಲ್‌ಗಳಲ್ಲಿ ಕೆಲಸ ಮಾಡುವ ಕಾರ್ಮಿಕರು
31. ಬೀದಿ ಬದಿಯ ವ್ಯಾಪಾರಿಗಳು
32. ಚಾಲಕರು/ನಿರ್ವಾಹಕರು/ಸಹಾಯಕರು/ ಕ್ಲೀನರ್‌ಗಳು/ಗಾಡಿ ಎಳೆಯುವವರು/ರಿಕ್ಷಾ ವಾಲಾಗಳು/ ಟಾಂಗಾವಾಲಾಗಳು.
33. ಎಲ್ಲಾ ಬಗೆಯ ರಿಪೇರಿ ಕೆಲಸ ಮತ್ತು ತ್ಯಾಜ್ಯ ವಿಲೇವಾರಿ ಕೆಲಸದಲ್ಲಿ ತೊಡಗಿರುವ ಕಾರ್ಮಿಕರು
34. ಚಿಂದಿ ಆಯುವವರು
35. ಅಡಿಗೆ ಕೆಲಸಗಾರರು/ಕಲ್ಯಾಣ ಮಂಟಪಗಳಲ್ಲಿ ಶುಚಿ ಕೆಲಸದಲ್ಲಿ ತೊಡಗಿರುವವರು/ಮಧ್ಯಾಹ್ನದ ಬಿಸಿ ಊಟದ ಕಾರ್ಮಿಕರು ಮತ್ತು ಸಹಾಯಕರು
36. ಸಫಾಯಿ ಕರ್ಮಚಾರಿಗಳು
37. ಕಛೇರಿಗಳಲ್ಲಿ ಶುಚಿ ಕೆಲಸದಲ್ಲಿ ತೊಡಗಿರುವ ಗುತ್ತಿಗೆ ಕಾರ್ಮಿಕರು

38. ಗುತ್ತಿಗೆ ಆಧಾರದ ಮೇಲೆ ನೇಮಕವಾಗಿರುವ ಭದ್ರತಾ ಸಿಬ್ಬಂದಿ/ವಾಚ್‌ಮನ್‌ಗಳು
39. ಪೋರ್ಟರ್
40. ಪ್ರವಾಸಿ ಗೈಡ್‌ಗಳು
41. ಮಂಡಕ್ಕಿ ಭಟ್ಟಿ ಕಾರ್ಮಿಕರು
42. ಛಾಯಾವೃತ್ತಿ ಕಾರ್ಮಿಕರು
43. ಇತರೆ ವರ್ಗ(ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ 2008ರ ಕಲಂ 2(m) ಹಾಗೂ ಕಲಂ 2(l) ರ ವ್ಯಾಖ್ಯಾನಕ್ಕೆ ಒಳಪಡುವ ಅಸಂಘಟಿತ ವರ್ಗದ ಎಲ್ಲಾ ಕಾರ್ಮಿಕರು)

ANNEXURE-3

| List of Factories Registered under Factories Act, 1948 - Hassan District | | | | | |
|---|---|---|---|---|---|
| Sl No | Manufacturing Process | Number of Industries | Male | Female | Total |
| 1 | Preservation of fruit and vegetables n.e.c. | 10 | 354 | 20 | 384 |
| 2 | Manufacture of pasteurised milk whether or not in bottles/ polythene packs etc. (plain or flavoured) | 15 | 943 | 81 | 1039 |
| 3 | Vegetable milling (production of flour or meal of dried leguminous vegetables(except dal), of roots or tubers, or of edible nuts) | 62 | 1173 | 1056 | 2291 |
| 4 | Processing and blending of tea including manufacture of instant tea | 11 | 367 | 77 | 455 |
| 5 | Coffee curing, roasting, grinding blending etc. and manufacturing of coffee products | 74 | 2330 | 2155 | 4559 |
| 6 | Manufacture of all types of textile garments and clothing accessories | 14 | 4783 | 13841 | 18638 |
| 7 | Sawing and planing of wood | 34 | 520 | 84 | 638 |
| 8 | Electric power generation by hydroelectric power plants | 14 | 293 | 26 | 333 |
| 9 | Maintenance and repair of motor vehicles | 50 | 1784 | 332 | 2166 |
| 10 | Others | 93 | 6719 | 4185 | 10997 |
| TOTAL | | 377 | 19266 | 21857 | 41500 |

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ ಎ ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:16ಕ್ಕೆ ಪೂರಕ ಟಿಪ್ಪಣಿ

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ, 1996ರ ಕಲಂ 18 ರನ್ವಯ ದಿನಾಂಕ: 18-01-2007 ರಂದು ಕರ್ನಾಟಕ ಸರ್ಕಾರವು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ರಚನೆ ಮಾಡಿದ್ದು ಮಾನ್ಯ ಕಾರ್ಮಿಕ ಸಚಿವರು ಮಂಡಳಿಯ ಅಧ್ಯಕ್ಷರಾಗಿದ್ದು, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕ ವರ್ಗದ ನಾಲ್ಕು (4) ಪ್ರತಿನಿಧಿಗಳು, ಕಟ್ಟಡ ನಿರ್ಮಾಣದಾರರ ನಾಲ್ಕು (4) ಪ್ರತಿನಿಧಿಗಳು ಮತ್ತು ಸರ್ಕಾರದ ನಾಲ್ಕು (4) ಪ್ರತಿನಿಧಿಗಳು, ಮಂಡಳಿಯಲ್ಲಿ ಒಟ್ಟು ಹನ್ನೆರಡು (12) ಮಂದಿ ಸದಸ್ಯರಿರುತ್ತಾರೆ.

ಮಂಡಳಿಯ ಮುಖ್ಯ ಧ್ಯೇಯೋದ್ದೇಶಗಳು:

- ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ 1996ರ ಅನುಸಾರ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರನ್ನು ಫಲಾನುಭವಿಗಳಾಗಿ ನೋಂದಣಿ.
- ಮಂಡಳಿ ಜಾರಿಗೆ ತಂದಿರುವ ಯೋಜನೆಗಳಡಿ ದೊರಕುವ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳ ಸಮರ್ಪಕ ವಿತರಣೆ.
- ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಸುಂಕ ಕಾಯ್ದೆ 1996 ಹಾಗು ಸುಂಕ ನಿಯಮಗಳು, 1998ರ ಅಡಿಯಲ್ಲಿ ಮಂಡಳಿಗೆ ಸುಂಕದ ರೂಪದಲ್ಲಿ ಆರ್ಥಿಕ ಸಂಪನ್ಮೂಲವನ್ನು ಸಂಗ್ರಹಿಸುವುದು.

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಜನವರಿ-2020 ರವರೆಗೆ 22.03 ಲಕ್ಷ ಫಲಾನುಭವಿಗಳು ನೋಂದಣಿಯಾಗಿದ್ದು, ಅದರಲ್ಲಿ 4,70,280 ಫಲಾನುಭವಿಗಳಿಗೆ ರೂ. 655.29 ಕೋಟಿ ಗಳಷ್ಟು ವಿವಿಧ ಸೌಲಭ್ಯಗಳಡಿ ಮಂಜೂರು ಮಾಡಲಾಗಿದೆ.

**ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ನೋಂದಣಿಯಾಗುವ ವಿಧಾನ**

ವಯೋಮಿತಿ: 18 ರಿಂದ 60 ವರ್ಷದೊಳಗಿರಬೇಕು
ನೋಂದಣಿ ಮಾಡುವ ಕಛೇರಿಗಳು: ಕಾರ್ಮಿಕ ಅಧಿಕಾರಿಗಳು/ಹಿರಿಯ ಕಾರ್ಮಿಕ ನಿರೀಕ್ಷಕರು/ಕಾರ್ಮಿಕ ನಿರೀಕ್ಷಕರು, ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತದ ಮುಖ್ಯ ಅಭಿಯಂತರರು
ನೋಂದಣಿಗಾಗಿ ಸಲ್ಲಿಸಬೇಕಾದ ಅಗತ್ಯ ದಾಖಲೆಗಳು:

ಎ) ನಮೂನೆ– V-1ರಲ್ಲಿ ಅರ್ಜಿ

ಬಿ) ಕಾಮಗಾರಿ ನಡೆಯುವ ಕಟ್ಟಡದ ಮಾಲೀಕರು/ ಗುತ್ತಿಗೆದಾರರು, **CREDAI** (Confederation of Real Estate Developers Association of India), BAI (Builders Association of India) ಅಥವಾ ಕರ್ನಾಟಕ ಸ್ಟೇಟ್ ಕಾಂಟ್ರಾಕ್ಟರ್ಸ್ ಅಸೋಸಿಯೇಷನ್ ನವರು ನಮೂನೆ– V(A)ರಲ್ಲಿ ನೀಡುವಂತಹ 'ಉದ್ಯೋಗದ ದೃಢೀಕರಣ ಪತ್ರ' ಅಥವಾ ನೋಂದಾಯಿತ ಕಾರ್ಮಿಕ ಸಂಘಗಳು ನಮೂನೆ– V(B)ರಲ್ಲಿ ನೀಡುವಂತಹ 'ಉದ್ಯೋಗದ ದೃಢೀಕರಣ ಪತ್ರ' ಅಥವಾ ಕಾರ್ಮಿಕ ಅಧಿಕಾರಿ / ಹಿರಿಯ ಕಾರ್ಮಿಕ ನಿರೀಕ್ಷಕರು / ಕಾರ್ಮಿಕ ನಿರೀಕ್ಷಕರು ನಮೂನೆ– V(C)ರಲ್ಲಿ ನೀಡುವಂತಹ 'ಉದ್ಯೋಗದ ದೃಢೀಕರಣ ಪತ್ರ' ಅಥವಾ ಪಂಚಾಯತಿ ಅಭಿವೃದ್ಧಿ ಅಧಿಕಾರಿ / ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು ನಮೂನೆ– V(D)ರಲ್ಲಿ ನೀಡುವಂತಹ 'ಉದ್ಯೋಗದ ದೃಢೀಕರಣ ಪತ್ರ'

ಸಿ) ಮೂರು ಪಾಸ್ ಪೋರ್ಟ್ ಅಳತೆಯ ಭಾವಚಿತ್ರಗಳು

ಡಿ) ವಯಸ್ಸಿನ ದೃಢೀಕರಣ ಪತ್ರ: ಶಾಲಾ ದಾಖಲಾತಿ, ವಾಹನ ಚಾಲನಾ ಪರವಾನಗಿ, ಪಾಸ್‌ಪೋರ್ಟ್, ಎಪಿಕ್‌ಕಾರ್ಡ್, ಆಧಾರ್‌ಕಾರ್ಡ್, ಎಲ್‌ಐಸಿ ವಿಮೆ ಪಾಲಿಸಿ ಅಥವಾ ಗ್ರಾಮ ಲೆಕ್ಕಿಗರು ಅಥವಾ ಕಂದಾಯ ನಿರೀಕ್ಷಕರು ಅಥವಾ ಸ್ಥಳೀಯ ಸಂಸ್ಥೆಯ ಅಧಿಕಾರಿಗಳು ಅಥವಾ ಜನನ ಮತ್ತು ಮರಣ ನೋಂದಣಾಧಿಕಾರಿಗಳಿಂದ ವಿತರಿಸಿದ ಪ್ರಮಾಣ ಪತ್ರ ಅಥವಾ ಸರ್ಕಾರಿ ಆಸ್ಪತ್ರೆ/ಇಎಸ್‌ಐ ಆಸ್ಪತ್ರೆ/ಸ್ಥಳೀಯ ಸಂಸ್ಥೆಗಳ ಆಸ್ಪತ್ರೆ ಅಥವಾ ನೋಂದಾಯಿತ ಎಂಬಿಬಿಎಸ್, ಆಯುರ್ವೇದ, ಯುನಾನಿ ಅಥವಾ ಹೋಮಿಯೋಪತಿ ವೈದ್ಯರು, ನೋಂದಾಯಿತ ಖಾಸಗಿ ಬಿ.ಡಿ.ಎಸ್ ವಿದ್ಯಾರ್ಹತೆ ಹೊಂದಿದ ದಂತ ವೈದ್ಯರಿಂದ ಪ್ರಮಾಣ ಪತ್ರ ಇವುಗಳಲ್ಲಿ ಯಾವುದಾದರೊಂದು ದಾಖಲೆ.

**ಸ್ವಯಂ ದೃಢೀಕೃತ ಅರ್ಜಿದಾರ ಹಾಗೂ ಅವನ ಅವಲಂಭಿತರ ಆಧಾರ್‌ಕಾರ್ಡ್ ಪ್ರತಿ ಕಡ್ಡಾಯವಾಗಿ ಸಲ್ಲಿಸುವುದು**

**ನೋಂದಣಿ ಶುಲ್ಕ: ರೂ. 25/– ಹಾಗೂ ವಂತಿಗೆ ಶುಲ್ಕ: ಪ್ರತಿ ವರ್ಷಕ್ಕೊಮ್ಮೆ ರೂ.25/–**

# KARNATAKA LEGISLATIVE COUNCIL

| | | |
|---|---|---|
| 1 | Starred Question No. | 16 |
| 2 | Name of Hon'ble Member | Shri M.A Gopala Swamy (Local Bodies Constituency) |
| 3 | To be answered on | 02/03/2020 |
| 4 | To be answered by | Hon'ble Minister for Labour and Sugar |

| Sl. No. | Question | Answer |
|---|---|---|
| a) | What are the programmes formulated by the Government for welfare of labourers; (furnish details) | The Department of Labour is implementing various Labour Enactments to ensure statutory benefits to the workers. Further department is fixing the Minimum Wages for 82 Scheduled Employments and the same is being revised from time to time. Under the department, 3 boards are functioning and implementing various schemes for the welfare of workers.<br><br>1] **Karnataka Building and Other Construction Workers Welfare Board** is implementing the 19 welfare and social security schemes to the registered construction workers and their dependents. Details are furnished in **Annexure-1**.<br><br>2] **The Karnataka State Unorganised Workers Social Security Board** is implementing the following schemes to provide social security to unorganised workers.<br><br>[i] **Karnataka State Private Commercial Transport Workers Accident Benefit Scheme:-** The following benefits will be provided to the Drivers of private commercial transport vehicles.<br><br>(a) **Accident benefit:-** In case of death due to accident Rs.5.00 Lakhs, in case of total permanent disability upto Rs.2.00 Lakh and for hospitalization upto Rs.1.00 lakh of accident benefit will be sanctioned. |

(b) **Educational Assistance:-** Educational Assistance of Rs.10,000/- per annum is being paid to maximum 2 children of the driver who succumbed to death due to accident or suffered total permanent disablement, who are studying in 1st standard to 12th / PUC.

(c) **Accident Life Saviour:-** To produce Accident Life Saviours to save the life of accident victims, drivers will be trained in First Aid Treatment.

(d) **Smart Card:-** Smart card is being issued to Drivers of private commercial transport vehicles under the scheme.

[ii] **Ambedkar Karmika Sahaya Hastha Scheme :**
Under this Scheme 11 category of unorganised workers i.e., Hamalis, Domestic Workers, Rag Pickers, Tailors, Mechanics, Washer men, Barbers, Gold Smiths, Iron Smiths, Potters and Kiln Workers will be registered and issued with smart card.

**[iii] Asha Deepa Scheme:**

To encourage employment opportunities in the private sectors to the candidates belonging to Schedule Cast and Schedule Tribes, the Government of Karnataka has framed a scheme "ASHADEEPA". The said scheme is being implemented through "Karnataka State Workers Welfare and Social Security (Ashadeepa Scheme) Society (R)" from the current year.The benefits available under this scheme are as follows :-

1) **Reimbursement of ESI and EPF contribution paid by the employer:-**
The ESI and EPF contribution paid by the employer who employs SC and ST candidates afresh will be reimbursed for a period of Two years subject to maximum limit of Rs.3000/- p.m. per candidates.

| | | |
|---|---|---|
| | | (2) **<u>Reimbursement of Stipend paid to apprentice trainees</u>**:-<br><br>The stipend amount under Apprenticeship Act, 1961 paid to the Apprentice Trainees belonging to SC and ST categories, who are undergoing training for a period of One year Normal and Two years Comprehensive Training, will be reimbursed for a maximum limit of Rs.5000/- p.m. per candidate and subject to 2/3rd of the total amount paid by them.<br><br>3) **<u>Reimbursement of salary for appointment after completion of Apprentice Training:-</u>**<br>If the employer who has given apprentice training to the candidates belonging to SC and ST categories, employs the same candidates in permanent posts, 50% of the salary subject to a maximum limit of Rs. 7,000/-p.m. per candidate will be reimbursed for a period of One year.<br><br>4) **<u>Pradhan Mantri Shram Yogi Man-Dhan (PM-SYM) scheme:-</u>** Under this Central Govt. contributory pension scheme the unorganized workers between the age group of 18-40 years will get a guaranteed monthly pension of Rs.3000/- after completion of 60 years of age.<br><br>3] **Karnataka Labour Welfare Board**: The facilities and privileges provided to the organized labours and their dependents who work in various factories and establishments and pay contribution to the Labour Welfare Board is given below.<br><br>1. Education assistance to children of workers:<br>2. Medical Assistance<br>3. Accident Benefit<br>4 Funeral Expenses<br>5. Annual sports activity<br>6. Medical check-up camps |

| | | |
|---|---|---|
| b) | What are the categories of workers identified by the Government;<br>How many categories of these workers are there in the Hassan District;<br>What are the measures taken by the Government to identify these workers and deliver the various schemes to them; (Furnish details) | 1] The Board is registering the workers as beneficiaries with the Board who are working in the field of building and other construction works. So far 39,049 building and other construction workers have been registered as beneficiaries of the Board in Hassan District.<br><br>To create awareness among the building and other construction workers in connection with the registration and benefits the following steps have been taken.<br>• In co-ordination with Karnataka Legal Services Authority, awareness in relation to registration of workers and the benefits available to them are being provided constantly both at the district and taluk level.<br>• Awareness has been created in a massive way by affixing hoardings in the offices of the Deputy Commissioners, Zilla & Taluk Panchayat Offices and Offices of the Labour Department having own buildings.<br>• Wide publicity is under taken with respect to registration of construction workers and schemes available to them with the help of Unions and representatives.<br>• A comprehensive IEC programme has also been implemented in order to create awareness among the public about the benefits of registration and the schemes available to the registered workers - through street plays, distribution of hand bills, advertisements in newspapers, calendars for workers and through SMS.<br>• Karmika Sahayavani 24x7 has been established in the 4th floor of Kalyana Suraksha Bhavan under the Department of Labour, Government of Karnataka. Information pertaining to the registration and schemes available for construction workers is provided. |

| | | |
|---|---|---|
| | | • One Karmika Bandhu in every Gram Panchayat and one Karmika Bandhu for two wards at city corporations have been appointed on commission basis to facilitate the registration of building and other construction workers and for provision of benefits.<br>• Currently, the registration and claim application process is available through online and the said services can be availed in all the offices of the Labour Inspectors / Seva Sindhu Kendras (Common Service Centres – CSC) or the workers themselves can directly access the web site and enroll and apply for claim applications.<br><br>2] **Karnataka State Un-organised Workers Social Security Board :**<br>Karnataka State Govt. has identified 43 categories of workers as unorganised workers (**List provided in Annexure-2).**<br>Under Karnataka State Private Commercial Transport Workers Accident Benefit Scheme, as per the data provided by The Transport Department, 34001 Drivers are having valid Driving Licence in Hassan District.<br>Under Ambedkar Karmika Sahaya Hasta Scheme in Hassan District 1195 workers belonging to 11 category of unorganised workers i.e., Hamalis, Domestic Workers, Rag Pickers, Tailors, Mechanics, Washer men, Barbers, Gold Smiths, Iron Smiths, Potters and Kiln Workers have been issued with smart card.<br><br>Under Pradhanmantri Shramyogi mandhan scheme so far 2171 beneficiaries have been registered.<br><br>3] **Karnataka Labour welfare Board** Organized workers are covered under this board. In Hassan district 19585 Organized workers are recorded. At present beneficiary amount will be remitted to the beneficiaries through R.T.G.S to their bank Accounts. |

| | | |
|---|---|---|
| | | **Hassan District Report:**<br>Labour Department has not conducted any survey to identify the workers. However, the workers who are enrolled as beneficiaries under various schemes implemented by department is as follows. |

| Sl. No. | Categories | Estab lishments | No. of workers |
|---|---|---|---|
| 1 | Plantations | 235 | 3205 |
| 2 | Shops & Commercial Establishments | 8208 | 13835 |
| 3 | Contract Labours | 20 | 6431 |
| 4 | Building & other Construction workers | - | 39049 |
| 5 | Registration of Un-organised workers under Ambedkar Sahaya Hastha Scheme | - | 1195 |
| 6 | Pradhanmantri Shramyogi ManDhan Scheme | - | 2171 |

| | | |
|---|---|---|
| c) | How many workers are working in the various Industries and factories in Hassan district; (furnish details) | The details of the factories registered under Factories Act, 1948 and workers working therein are furnished in the **Annexure-3** (enclosed). |
| d) | Furnish the details of the Grants released by the Government to the Labour Department in Hassan district for the last 3 years;<br>For what purposes these grants have been utilised (furnish details) | The Department is not implementing any specific welfare schemes. But various Boards under the department are implementing various welfare schemes. Details of the funds released in respect of Hassan District is as follows:<br>**Karnataka State Child Labour Eradication Project Society** |

| Purpose | Year | Grant released (Rs.) | Expenditure (Rs.) |
|---|---|---|---|
| Honorarium to staff and awareness | 2017-18 | 24,46,545 | 11,45,399 |
| | 2018-19 | 9,29,000 | 4,90,384 |
| | 2019-20 | 8,30,000 | 10,45,836 |

**Karnataka Labour Welfare Board**

No specific grant released by Govt., to Hassan District. However, the benefits extended to the workers of Hassan District for the last 3 years is as follows.

| Year | No. of beneficiaries | Amount |
|---|---|---|
| 2017-18 | 344 | 13,17,000 |
| 2018-19 | 449 | 18,73,000 |
| 2019-20 | 1202 | 46,44,000 |

**Karnataka State Un-organised Workers Social Security Board**

Ambedkar Karmika Sahaya Hastha Scheme

| Purpose | Year | Grant released (Rs.) | Expenditure (Rs.) |
|---|---|---|---|
| Workers Facilitation Centre | 2017-18 | - | - |
| | 2018-19 | 14,57,200 | - |
| | 2019-20 | 2,40,000 | 46,44,000 |
| Shram Samman Award | 2017-18 | - | - |
| | 2018-19 | 4,47,050 | 4,06,555 |
| | 2019-20 | 5,51,000 | - |

**Karnataka State Private Commercial Transport Workers Accident Benefit Scheme**

| Purpose | Year | Grant released (Rs.) | Expenditure (Rs.) |
|---|---|---|---|
| Accident Life Saviour Training | 2017-18 | 2,80,000 | 2,32,500 |
| | 2018-19 | 5,25,000 | 3,18,000 |
| | 2019-20 | - | - |
| Shram Samman Award | 2017-18 | - | - |
| | 2018-19 | 54,800 | - |
| | 2019-20 | 82,000 | - |

| | | | |
|---|---|---|---|
| Accident Benefit | 2017-18 | 10,00,000 | 10,00,000 |
| | 2018-19 | 19,00,000 | 19,00,000 |
| | 2019-20 | 25,50,000 | 25,00,000 |
| Educational Assistance | 2017-18 | - | - |
| | 2018-19 | 30,000 | 30,000 |
| | 2019-20 | 20,000 | 20,000 |

**Asha Deepa Scheme**

| Purpose | Year | Grant released (Rs.) | Expenditure (Rs.) |
|---|---|---|---|
| To promote employment of SC/ST employees in private sector | 2017-18 | - | - |
| | 2018-19 | - | - |
| | 2019-20 | 50,00,000 | - |

**No: E-LD 63 LET 2020**

**( Arabail Shivram Hebbar)**
**Minister for Labour & Sugar**

## Annexure-I

**The Karnataka Building and Other Construction Workers Board has so far formulated 19 welfare schemes for the benefit of the construction workers, such as :**

1. Pension -{Sec. 22(1)(b) read with Rule 39}: After completion of 3 years as a beneficiary Rs. 2,000/- per month
2. Family Pension: -{Sec. 22(1)(b) read with Rule 39A}: The Spouse of the deceased registered worker Rs. 1,000/- per month
3. Disability Pension -{Sec. 22(1)(b) read with Rule 40}: Rs. 2,000/- per month and Ex gratia payment up to Rs. 2,00,000/- depending upon the percentage of disability.
4. Assistance for Spectacles, hearing aid, artificial limb, wheel chair- reimbursement -{Sec. 22(1)(b) read with Rule 40A}.
5. Shrama Samarthya Toolkit-cum- Training Programme -{Sec. 22(1)(h) read with Rule 41}: Rs. 20,000/-
6. Shrama Samsara Samarthya training scheme: Sec. 22(1)(h) read with Rule 41A}
7. Housing (Karmika Gruha Bhagya) {Sec. 22(1)(c) read with Rule 42} :Rs. 2,00,000/-
8. Maternity Assistance (Thayi Lakshmi Bond)- {Sec. 22(1)(g) read with Rule 43}: Assistance of Rs. 30,000/- in case of female child and a sum of Rs. 20,000/- in case of male child (for first two children only)
9. Establishment of Crèche facility: {Sec. 22(1)(g) read with Rule 43B}
10. Funeral Expenses: {Sec. 22(1)(h) read with Rule 44} Rs. 4,000/-to meet the funeral expenses of the deceased construction worker and Rs. 50,000/- as ex-gratia
11. Educational Assistance - (Kalike Bhagya) {Sec. 22(1)(e) read with Rule 45}: ( Two children of the registered construction worker)

| SL. NO | Name of the education course or standard or grade | Annual Educational Assistance | |
|---|---|---|---|
| | | Boys | Girls |
| 1. | KG / pre school/ Nursery (Age 3 to 5) | 3,000 | 4,000 |
| 2. | 1st to 4th std | 3,000 | 4,000 |
| 3. | 5th to 8th std | 5,000 | 6,000 |
| 4. | 9th & 10th Std | 10,000 | 11,000 |
| 5. | 1st PUC & 2nd PUC | 10,000 | 14,000 |
| 6. | ITI | 12,000 | 15,000 |
| 7. | Graduation (Every year) | 15,000 | 20,000 |
| 8. | Post Graduation (Every year) | 20,000 | 20,000 |
| | Initial amount | 20,000 | 25,000 |
| 9. | Enginnering (BE/Btech) | 25,000 | 25,000 |
| | Every year) Initial Amount 25,000/- | 25,000 | 30,000 |
| 10. | Medical (MBBS) | 30,000 | 30,000 |

| | | | |
|---|---|---|---|
| | Every year) Initial Amount 30,000/- | 40,000 | 50,000 |
| 11. | Polytechnic (Diploma) | 15,000 | 20,000 |
| 12. | M.Tech /ME | 30,000 | 35,000 |
| 13. | MD (Medical) | 45,000 | 55,000 |
| 14. | Ph.D (Any Subject)<br>(Every year) Max -3 years | 25,000 | 30,000 |

12. Medical Assistance ( Karmika Arogya Bhagya)- {Sec. 22(1)(f) read with Rule 46} : Rs. 300/- per day of hospitalization to a maximum of Rs. 10,000/- for continuous period of hospitalization
13. Accidental Death/ Permanent Disability-{Sec. 22(1)(a) read with Rule 47}: Up to Rs. 5,00,000/-
14. Treatment of Major Ailments (Karmika Chikitsa Bhagya)- {Sec. 22(1)(f) read with Rule 48} : **Upto ` 2,00,000/-:** Treatment of Major Ailments viz. Heart Operation, Kidney Transplantation and Cancer, Eye Operation, Paralysis, Orthopedics Operation, Uterus Operation, Asthma, Miscarriage, Gall Bladder Ailments, Kidney Stone Removal, Brain Hemorrhage, Ulcer, Dialysis, Kidney Related Surgery, ENT Treatment & Surgery, Neurosurgery, Vascular Surgery, Esophagus Treatment & Surgery, Gastrointestinal Surgery, Breast Related Treatment and Surgery, Hernia Surgery, Appendix Surgery, Treatment of Factures / Dislocation, General Surgery. (Subject to C.G.H.S. Rates)
15. Marriage Assistance (Gruha Lakshmi Bond)- {Sec. 22(1)(h) read with Rule 49} **50,000/-**: Marriage Assistance to the beneficiary or to his 2 children.
16. LPG connection to registered construction workers.( Karmika Anila Bhagya)-{Sec. 22(1)(h) read with Rule 49D} connection including a two burner stove and refill for his or her family
17. BMTC bus pass-{Sec. 22(1)(h) read with Rule 49E} Assistance of free Bus Pass to registered construction workers to commute in Bengaluru Metropolitan Transportation Corporation (BMTC) buses
18. KSRTC bus pass-{Sec. 22(1)(h) read with Rule 49 F}Assistance of free Student Bus Pass to children of registered construction workers travelling in KSRTC buses
19. Assistance for pre-school education and nutritional support of the child of the registered woman construction worker -Thayi Magu Sahaya Hastha: –{Sec. 22(1)(g) read with Rule 43A} : Rs. 6000/-(at the rate of Rs. 500/- per month)

## Annexure-2

## 43 Categories of Unorganised Workers list

1. Tailors
2. Washermen
3. Head load Workers
4. Hotel Workers
5. Auto, Taxi, Private Bus and Lorry Drivers and Conductors
6. Auto Mobile workshop workers
7. Domestic Workers.
8. Labourers involved in Agriculture/ Horticulture and Animal rearing
9. Workers involved in Coir work
10. Home based Weavers
11. Fishermen
12. Potters
13. Cobblers
14. Barbers
15. Butchers
16. Blacksmiths
17. Goldsmiths
18. Home based Beedi workers
19. Home based Agarbatti workers
20. Sculptors/Craftsmen
21. Small Artists
22. Workers involved in Bamboo work
23. Workers involved in Oil processing /Food processing
24. Workers involved in timber work
25. Sericulture workers
26. Cotton ginning and Processing workers
27. Workers working in Printing press
28. Workers involved in stone crushing
29. Workers working in Tanneries
30. Workers working in all types of mills

31. Street vendors
32. Drivers/ Conductors/Helpers/Cleaners Cart pullers /Rickshaw wallas/Tanga Wallas
33. Workers involved in all kinds of repair work and waste disposal
34. Rag pickers
35. Workers involved in Cooking/ Cleaning in marriage halls/ Mid day meal labourers and assistants
36. Sanitary workers
37. Workers involved in Office cleaning on contract basis
38. Security Guards/ Watchmen working on contract basis
39. Porters
40. Tourist Guides
41. Mandakki Batti workers
42. Photo Graphers
43. Other Categories.(The workers covered under Sec2(m) & 2(l) of unorganized workers Social Security Act,2008)

ANNEXURE-3

| List of Factories Registered under Factories Act, 1948 - Hassan District | | | | | |
|---|---|---|---|---|---|
| Sl No | Manufacturing Process | Number of Industries | Male | Female | Total |
| 1 | Preservation of fruit and vegetables n.e.c. | 10 | 354 | 20 | 384 |
| 2 | Manufacture of pasteurised milk whether or not in bottles/ polythene packs etc. (plain or flavoured) | 15 | 943 | 81 | 1039 |
| 3 | Vegetable milling (production of flour or meal of dried leguminous vegetables(except dal), of roots or tubers, or of edible nuts) | 62 | 1173 | 1056 | 2291 |
| 4 | Processing and blending of tea including manufacture of instant tea | 11 | 367 | 77 | 455 |
| 5 | Coffee curing, roasting, grinding blending etc. and manufacturing of coffee products | 74 | 2330 | 2155 | 4559 |
| 6 | Manufacture of all types of textile garments and clothing accessories | 14 | 4783 | 13841 | 18638 |
| 7 | Sawing and planing of wood | 34 | 520 | 84 | 638 |
| 8 | Electric power generation by hydroelectric power plants | 14 | 293 | 26 | 333 |
| 9 | Maintenance and repair of motor vehicles | 50 | 1784 | 332 | 2166 |
| 10 | Others | 93 | 6719 | 4185 | 10997 |
| | TOTAL | 377 | 19266 | 21857 | 41500 |

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ ಎ ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:16ಕ್ಕೆ ಪೂರಕ ಟಿಪ್ಪಣಿ**

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ, 1996ರ ಕಲಂ 18 ರನ್ವಯ ದಿನಾಂಕ: 18-01-2007 ರಂದು ಕರ್ನಾಟಕ ಸರ್ಕಾರವು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ರಚನೆ ಮಾಡಿದ್ದು ಮಾನ್ಯ ಕಾರ್ಮಿಕ ಸಚಿವರು ಮಂಡಳಿಯ ಅಧ್ಯಕ್ಷರಾಗಿದ್ದು, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕ ವರ್ಗದ ನಾಲ್ಕು (4) ಪ್ರತಿನಿಧಿಗಳು, ಕಟ್ಟಡ ನಿರ್ಮಾಣದಾರರ ನಾಲ್ಕು (4) ಪ್ರತಿನಿಧಿಗಳು ಮತ್ತು ಸರ್ಕಾರದ ನಾಲ್ಕು (4) ಪ್ರತಿನಿಧಿಗಳು, ಮಂಡಳಿಯಲ್ಲಿ ಒಟ್ಟು ಹನ್ನೆರಡು (12) ಮಂದಿ ಸದಸ್ಯರಿರುತ್ತಾರೆ.

ಮಂಡಳಿಯ ಮುಖ್ಯ ಧ್ಯೇಯೋದ್ದೇಶಗಳು:

- ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ 1996ರ ಅನುಸಾರ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರನ್ನು ಫಲಾನುಭವಿಗಳಾಗಿ ನೋಂದಣಿ.
- ಮಂಡಳಿ ಜಾರಿಗೆ ತಂದಿರುವ ಯೋಜನೆಗಳಡಿ ದೊರಕುವ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳ ಸಮರ್ಪಕ ವಿತರಣೆ.
- ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಸುಂಕ ಕಾಯ್ದೆ 1996 ಹಾಗು ಸುಂಕ ನಿಯಮಗಳು, 1998ರ ಅಡಿಯಲ್ಲಿ ಮಂಡಳಿಗೆ ಸುಂಕದ ರೂಪದಲ್ಲಿ ಆರ್ಥಿಕ ಸಂಪನ್ಮೂಲವನ್ನು ಸಂಗ್ರಹಿಸುವುದು.

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಜನವರಿ-**2020** ರವರೆಗೆ **22.03** ಲಕ್ಷ ಫಲಾನುಭವಿಗಳು ನೋಂದಣಿಯಾಗಿದ್ದು, ಅದರಲ್ಲಿ **4,70,280** ಫಲಾನುಭವಿಗಳಿಗೆ ರೂ. **655.29 ಕೋಟಿ** ಗಳಷ್ಟು ವಿವಿಧ ಸೌಲಭ್ಯಗಳಡಿ ಮಂಜೂರು ಮಾಡಲಾಗಿದೆ.

### ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ನೋಂದಣಿಯಾಗುವ ವಿಧಾನ

ವಯೋಮಿತಿ: 18 ರಿಂದ 60 ವರ್ಷದೊಳಗಿರಬೇಕು
ನೋಂದಣಿ ಮಾಡುವ ಕಛೇರಿಗಳು: ಕಾರ್ಮಿಕ ಅಧಿಕಾರಿಗಳು/ಹಿರಿಯ ಕಾರ್ಮಿಕ ನಿರೀಕ್ಷಕರು/ಕಾರ್ಮಿಕ ನಿರೀಕ್ಷಕರು, ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತದ ಮುಖ್ಯ ಅಭಿಯಂತರರು
ನೋಂದಣಿಗಾಗಿ ಸಲ್ಲಿಸಬೇಕಾದ ಅಗತ್ಯ ದಾಖಲೆಗಳು:

ಎ) ನಮೂನೆ– V-1ರಲ್ಲಿ ಅರ್ಜಿ

ಬಿ) ಕಾಮಗಾರಿ ನಡೆಯುವ ಕಟ್ಟಡದ ಮಾಲೀಕರು/ ಗುತ್ತಿಗೆದಾರರು, CREDAI (Confederation of Real Estate Developers Association of India), BAI (Builders Association of India) ಅಥವಾ ಕರ್ನಾಟಕ ಸ್ಟೇಟ್ ಕಾಂಟ್ರಾಕ್ಟರ್ಸ್ ಅಸೋಸಿಯೇಷನ್ ನವರು ನಮೂನೆ– V(A)ರಲ್ಲಿ ನೀಡುವಂತಹ 'ಉದ್ಯೋಗದ ದೃಢೀಕರಣ ಪತ್ರ' ಅಥವಾ ನೋಂದಾಯಿತ ಕಾರ್ಮಿಕ ಸಂಘಗಳು ನಮೂನೆ– V(B)ರಲ್ಲಿ ನೀಡುವಂತಹ 'ಉದ್ಯೋಗದ ದೃಢೀಕರಣ ಪತ್ರ' ಅಥವಾ ಕಾರ್ಮಿಕ ಅಧಿಕಾರಿ / ಹಿರಿಯ ಕಾರ್ಮಿಕ ನಿರೀಕ್ಷಕರು / ಕಾರ್ಮಿಕ ನಿರೀಕ್ಷಕರು ನಮೂನೆ– V(C)ರಲ್ಲಿ ನೀಡುವಂತಹ 'ಉದ್ಯೋಗದ ದೃಢೀಕರಣ ಪತ್ರ' ಅಥವಾ ಪಂಚಾಯತಿ ಅಭಿವೃದ್ಧಿ ಅಧಿಕಾರಿ / ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು ನಮೂನೆ– V(D)ರಲ್ಲಿ ನೀಡುವಂತಹ 'ಉದ್ಯೋಗದ ದೃಢೀಕರಣ ಪತ್ರ'

ಸಿ) ಮೂರು ಪಾಸ್ ಪೋರ್ಟ್ ಅಳತೆಯ ಭಾವಚಿತ್ರಗಳು

ಡಿ) ವಯಸ್ಸಿನ ದೃಢೀಕರಣ ಪತ್ರ: ಶಾಲಾ ದಾಖಲಾತಿ, ವಾಹನ ಚಾಲನಾ ಪರವಾನಗಿ, ಪಾಸ್‌ಪೋರ್ಟ್, ಎಪಿಕ್‌ಕಾರ್ಡ್, ಆಧಾರ್‌ಕಾರ್ಡ್, ಎಲ್‌ಐಸಿ ವಿಮೆ ಪಾಲಿಸಿ ಅಥವಾ ಗ್ರಾಮ ಲೆಕ್ಕಿಗರು ಅಥವಾ ಕಂದಾಯ ನಿರೀಕ್ಷಕರು ಅಥವಾ ಸ್ಥಳೀಯ ಸಂಸ್ಥೆಯ ಅಧಿಕಾರಿಗಳು ಅಥವಾ ಜನನ ಮತ್ತು ಮರಣ ನೋಂದಣಾಧಿಕಾರಿಗಳಿಂದ ವಿತರಿಸಿದ ಪ್ರಮಾಣ ಪತ್ರ ಅಥವಾ ಸರ್ಕಾರಿ ಆಸ್ಪತ್ರೆ/ಇಎಸ್‌ಐ ಆಸ್ಪತ್ರೆ/ಸ್ಥಳೀಯ ಸಂಸ್ಥೆಗಳ ಆಸ್ಪತ್ರೆ ಅಥವಾ ನೋಂದಾಯಿತ ಎಂಬಿಬಿಎಸ್, ಆಯುರ್ವೇದ, ಯುನಾನಿ ಅಥವಾ ಹೋಮಿಯೋಪತಿ ವೈದ್ಯರು, ನೋಂದಾಯಿತ ಖಾಸಗಿ ಬಿ.ಡಿ.ಎಸ್ ವಿದ್ಯಾರ್ಹತೆ ಹೊಂದಿದ ದಂತ ವೈದ್ಯರಿಂದ ಪ್ರಮಾಣ ಪತ್ರ ಇವುಗಳಲ್ಲಿ ಯಾವುದಾದರೊಂದು ದಾಖಲೆ.

ಸ್ವಯಂ ದೃಢೀಕೃತ ಅರ್ಜಿದಾರ ಹಾಗೂ ಅವನ ಅವಲಂಭಿತರ ಆಧಾರ್‌ಕಾರ್ಡ್ ಪ್ರತಿ ಕಡ್ಡಾಯವಾಗಿ ಸಲ್ಲಿಸುವುದು

ನೋಂದಣಿ ಶುಲ್ಕ: ರೂ. 25/– ಹಾಗೂ ವಂತಿಗೆ ಶುಲ್ಕ: ಪ್ರತಿ ವರ್ಷಕ್ಕೊಮ್ಮೆ ರೂ.25/–